**ನಾನು ದೇವರ ಹೆಸರಿನಲ್ಲಿ ದಿನಾಂಕ 12-12-2023 ರಂದು ಪ್ರಮಾಣ ವಚನ ಸ್ವೀಕರಿಸುತ್ತಿದ್ದೇನೆ.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

**7.** ದಿನಾಂಕ **14–02–2019** ರಂದು ಎ.ಸಿ.ಬಿ. ಕಛೇರಿಯಲ್ಲಿ ನಾನು ಹಾಜರುಪಡಿಸಿದ್ದ ಮತ್ತು ತಾಲ್ಲೂಕು ಕಛೇರಿಯ ಹೊರಗೆ ಆರೋಪಿತನಿಗೆ ನಾನು ಕೊಟ್ಟಿದ್ದ ಹಣವನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ **1** ಪೇಪರ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಪರ ವಕೀಲರ ಸಮಕ್ಷಮ ತೆರೆಯಲಾಯಿತು). ಸದರಿ ರೂ.**500/–** ನೋಟನ್ನು ಈಗ ನೋಡಿದೆ. ಅದನ್ನು ಮುದ್ದೆ ಮಾಲು **10** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**10**)

**(**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆ ದೂರು ಮತ್ತು ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸ್ವಲ್ಪ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ವಾದ ಕೇಳಿ ಅನುಮತಿ ಕೊಡಲಾಯಿತು**)**

**ಪಾಟೀ ಸವಾಲು: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

**8**. ಎಸಿಬಿ ಕಛೇರಿಗೆ ನಾನು ರೂ.**500/–** ನೋಟನ್ನು ತೆಗೆದುಕೊಂಡು ಹೋದ ನಂತರ ಅಲ್ಲಿ ಚಾಸಾ–**2** ಹುಸೇನ್ ಶರೀಫ್ ರವರು ಸದರಿ ನೋಟಿನ ಸಂಖ್ಯೆಯನ್ನು ಉಕ್ತಲೇಖನ ಕೊಟ್ಟರು ಹಾಗೂ ಅದನ್ನು ಚಾಸಾ–**3** ಒಂದು ಹಾಳೆಯಲ್ಲಿ ಬರೆದರು ಎಂದರೆ ನಿಜ. ನಾನು ಎಸಿಬಿ ಕಛೇರಿಗೆ ಹೋದಾಗ ಅವರು ಒಂದು ಡಬ್ಬಿಯಲ್ಲಿ ಇದ್ದ ಸೋಡಿಯಂ ಕಾರ್ಬೊನೇಟ್ ಪುಡಿಯಲ್ಲಿ ಸ್ವಲ್ಪ ಪುಡಿಯನ್ನು ಮಾದರಿಗಾಗಿ ಒಂದು ಪ್ರತ್ಯೇಕವಾದ ಕಾಗದಕದಲ್ಲಿ ತೆಗೆದು ಅದನ್ನು ಮಡಚಿ ಪ್ಲಾಸ್ಟಿಕ್ ಖಾಲಿ ಕವರಿಗೆ ಹಾಕಿ ಖಾಕಿ ಬಣ್ಣದ ಕವರಿನಲ್ಲಿ ಇಟ್ಟು ಮೊಹರು ಮಾಡಿದರು ಎಂದರೆ ನಿಜ.

(ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ **1** ಪೇಪರ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಪರ ವಕೀಲರ ಸಮಕ್ಷಮ ತೆರೆಯಲಾಯಿತು).

ಈಗ ನನಗೆ ತೋರಿಸಿದ ಸೋಡಿಯಂ ಕಾರ್ಬೋನೆಟ್ ಇರುವ ಕವರ್ ಅದೇ. ಸಾಕ್ಷಿ

ಈ ಕವರನ್ನು ಗುರುತಿಸಿದ ಕಾರಣ ಇದನ್ನು ಮುದ್ದೆ ಮಾಲು **11** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**5**)

**9**. ಅದೇ ಪ್ರಕಾರ ಡಿಸ್ಟಿಲ್ ವಾಟರನ್ನೂ ಸಹ ಒಂದು ಗಾಜಿನ ಬಾಟಲಿಯಲ್ಲಿ ತೆಗೆದುಕೊಂಡು ಅದನ್ನೂ ಸಹ ಮೊಹರು ಮಾಡಿದರು ಎಂದರೆ ನಿಜ. ಈಗ ನನಗೆ ತೋರಿಸಿದ ಡಿಸ್ಟಿಲ್ ವಾಟರ್ ಬಾಟಲ್ ಅದೇ ಎಂದರೆ ನಿಜ. ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು ಮುದ್ದೆ ಮಾಲು **12** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**4**) ಈ ಎಲ್ಲಾ ವಹಿಸುವಿಕೆ ಪ್ರಕ್ರಿಯೆಯ ಪಂಚನಾಮೆ ಮಾಡುವಾಗ ಭಾವಚಿತ್ರಗಳನ್ನು ತೆಗೆದರು ಎಂದರೆ ನಿಜ. ಈಗ ನನಗೆ ತೋರಿಸಿದ **7** ಭಾವಚಿತ್ರಗಳು ಅವೇ ಎಂದರೆ ನಿಜ. ಸದರಿ ಭಾವಚಿತ್ರಗಳಿಗೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ **65** ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇವೆಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಹೇಳಿರುವ ಕಾರಣ ಮತ್ತು ಅದನ್ನು ಆರೋಪಿತನ ಪರ ವಕೀಲರು ಒಪ್ಪಿರುವ ಕಾರಣ ಸದರಿ ಭಾವಚಿತ್ರಗಳನ್ನು ನಿಪಿ**–6** ರಿಂದ **12** ಎಂದು ಗುರುತಿಸಲಾಯಿತು.

**10**. ಎಸಿಬಿ ಕಛೇರಿಯಿಂದ ಆರೋಪಿತನ ಕಛೇರಿಗೆ ಹೋಗುವ ಮೊದಲು ಎಸಿಬಿ ಅಧಿಕಾರಿಗಳು ನನಗೆ ಒಂದು ವಾಯ್ಸ್ ರೆಕಾರ್ಡರನ್ನು ಕೊಟ್ಟು ಆರೋಪಿತನೇನಾದರೂ ಲಂಚದ ಹಣದ ಬೇಡಿಕೆ ಇಟ್ಟರೆ ಅದನ್ನು ರೆಕಾರ್ಡ್ ಮಾಡಿಕೊಳ್ಳಬೇಕೆಂದು ನನಗೆ ಸೂಚಿಸಿದ್ದರು ಎಂದರೆ ನಿಜ. ಆರೋಪಿತ ನನ್ನಿಂದ ಹಣ ಪಡೆದ ನಂತರ ನಾನು ಎಸಿಬಿಯವರಿಗೆ ಸಂಜ್ಞೆ ಮಾಡಿದ ನಂತರ ಅವರು ತಾಲ್ಲೂಕು ಕಛೇರಿಯ ಒಳಗೆ ಬಂದಾಗ ಅಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು ಎಂದರೆ ನಿಜ. ಆ ಸಂದರ್ಭದಲ್ಲಿ ಮಾದರಿಗಾಗಿ ಸ್ವಲ್ಪ ದ್ರಾವಣವನ್ನು ಒಂದು ಬಾಟಲಿಗೆ ಹಾಕಿ ಅದನ್ನು ಮೊಹರು ಮಾಡಿದರು ಎಂದರೆ ನಿಜ. ಸದರಿ ಬಾಟಲಿ ಈಗ ನನಗೆ ತೋರಿಸಿದ ಬಾಟಲಿ ಎಂದರೆ ನಿಜ. ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು ಮುದ್ದೆ ಮಾಲು **13** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**8**)

**11**. ಆರೋಪಿತನ ಕಛೇರಿಯಲ್ಲಿ ವಾಯ್ಸ್ ರೆಕಾರ್ಡರಿನ ಮೂಲಕ ನಾನು ರೆಕಾರ್ಡ್ ಮಾಡಿಕೊಂಡಿದ್ದ ವಿಷಯವನ್ನು ಎ.ಸಿ.ಬಿ. ಕಛೇರಿಗೆ ಬಂದ ನಂತರ ಲ್ಯಾಪ್‌ಟಾಪಿಗೆ

ಡೌನ್‌ಲೋಡ್ ಮಾಡಿ ಅದನ್ನು ನಮಗೆ ಕೇಳಿಸಿದರು ಎಂದರೆ ನಿಜ. ಆಗ ಅದನ್ನು ಒಂದು ಡಿ.ವಿ.ಡಿ.ಗೆ ಡೌನ್‌ಲೋಡ್ ಮಾಡಿದರು ಎಂದರೆ ನಿಜ. ಸದರಿ ಸಿಡಿಯನ್ನು ಮೊಹರು ಮಾಡಿದರು ಎಂದರೆ ನಿಜ.

(ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ **1** ಪೇಪರ್ ಕವರನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಪರ ವಕೀಲರ ಸಮಕ್ಷಮ ತೆರೆಯಲಾಯಿತು).

(ಸದರಿ ಕವರಿನಲ್ಲಿದ್ದ ಡಿ.ವಿ.ಡಿ.ಯನ್ನು ಈಗ ಆರೋಪಿತ, ಆತನ ವಕೀಲರ ಸಮಕ್ಷಮ ಮಾನ್ಯ ಪಿಪಿರವರ ಕೋರಿಕೆಯ ಮೇರೆಗೆ ನ್ಯಾಯಾಲಯದಲ್ಲೆ ಪ್ಲೇ ಮಾಡಲಾಯಿತು. ಅದರಲ್ಲಿ **18.02** ನಿಮಿಷದ ಸಂಭಾಷಣೆ ಇದೆ.)

ಸದರಿ ಸಂಭಾಷಣೆ ಇರುವ ಡಿವಿಡಿಯನ್ನು ಮುದ್ದೆ ಮಾಲು **14** ಎಂದು ಗುರುತಿಸಲಾಯಿತು. (ಆರ್ಟಿಕಲ್ ನಂ.**13**)

ಸದರಿ ಸಂಭಾಷಣೆಯನ್ನು ಬರವಣಿಗೆ ಮಾಡಿ ಅದರ ಪ್ರಿಂಟನ್ನು ಸಹ ತೆಗೆದರು ಎಂದರೆ ನಿಜ. ಸದರಿ ಲೇಖಿ ಪ್ರತಿಯನ್ನು ಈಗ ನೋಡಿದೆ ಅದನ್ನು ನಿಪಿ–**13** ಎಂದು ಗುರುತಿಸಲಾಯಿತು.

**12.** ಆರೋಪಿತನ ಬಳಿ ನನ್ನ ಅರ್ಜಿಗೆ ಸಂಬಂಧಿಸಿದ ಇದ್ದ ಕಡತದ ದೃಢೀಕೃತ ಪ್ರತಿಯನ್ನು ಚಾಸಾ–**4** ರವರಿಂದ ಮಾಡಿಸಿ ತನಿಖಾಧಿಕಾರಿ ಪಡೆದುಕೊಂಡರು ಎಂದರೆ ನಿಜ. ಸದರಿ ದಾಖಲೆ ಈಗ ನನಗೆ ತೋರಿಸಿದ ದೋಷಾರೋಪಣ ಪಟ್ಟಿಯೊಂದಿಗೆ ಲಗತ್ತಿಸಿರುವ ಪುಟ ಸಂಖ್ಯೆ **209** ರಿಂದ **215** ರಲ್ಲಿ ಇದೆ ಎಂದರೆ ನಿಜ. ಅದನ್ನು ಒಟ್ಟಾಗಿ ನಿಪಿ–**14** ಎಂದು ಗುರುತಿಸಲಾಯಿತು. ಈ ಟ್ರಾಪ್ ಪ್ರಕ್ರಿಯೆ ಸಂದರ್ಭದಲ್ಲಿ ಪಂಚನಾಮೆ ಮಾಡುವಾಗ ಭಾವಚಿತ್ರಗಳನ್ನು ತೆಗೆದರು ಎಂದರೆ ನಿಜ. ಈಗ ನನಗೆ ತೋರಿಸಿದ **7** ಭಾವಚಿತ್ರಗಳು ಅವೇ ಎಂದರೆ ನಿಜ. ಸದರಿ ಭಾವಚಿತ್ರಗಳಿಗೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ **65** ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇವೆಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಹೇಳಿರುವ ಕಾರಣ ಮತ್ತು ಅದನ್ನು ಆರೋಪಿತನ ಪರ ವಕೀಲರು ಒಪ್ಪಿರುವ ಕಾರಣ ಸದರಿ ಭಾವಚಿತ್ರಗಳನ್ನು ನಿಪಿ–**15** ರಿಂದ **21** ಎಂದು ಗುರುತಿಸಲಾಯಿತು.

**13**. ಆರೋಪಿತನ ಜೊತೆ ಸಂಭಾಷಣೆ ನಡೆಸಿದ ಕಾಲದಲ್ಲಿ ನನ್ನ ಧ್ವನಿಯಲ್ಲಿ ಇದ್ದ ಅಂಶಗಳನ್ನು ಪ್ರತ್ಯೇಕಿಸಿ ಅದರ ಲೇಖಿ ಪ್ರತಿಯನ್ನು ತೆಗೆದರು ಎಂದರೆ ನಿಜ. ಸದರಿ ಲೇಖಿ ಪ್ರತಿಯನ್ನು ನನಗೆ ಕೊಟ್ಟು ಎರಡು ಭಾರಿ ನನ್ನ ಬಳಿ ಅದರಲ್ಲಿರುವ ಅಂಶಗಳನ್ನು ಹೇಳಿಸಿದರು ಮತ್ತು ಅದನ್ನು ರೆಕಾರ್ಡ್ ಮಾಡಿದರು ಎಂದರೆ ನಿಜ. ಸದರಿ ಲೇಖಿ ಪ್ರತಿಯನ್ನು ಈಗ ನೋಡಿದೆ. ಅದನ್ನು ನಿಪಿ–**22** ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿಯೂ ಭಾವಚಿತ್ರಗಳನ್ನು ತೆಗೆದರು ಎಂದರೆ ನಿಜ. ಈಗ ನನಗೆ ತೋರಿಸಿದ **2** ಭಾವಚಿತ್ರಗಳು ಅವೇ ಎಂದರೆ ನಿಜ. ಸದರಿ ಭಾವಚಿತ್ರಗಳಿಗೆ ಸಂಬಂಧಿಸಿದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ **65** ಬಿ ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದೇವೆಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಹೇಳಿರುವ ಕಾರಣ ಮತ್ತು ಅದನ್ನು ಆರೋಪಿತನ ಪರ ವಕೀಲರು ಒಪ್ಪಿರುವ ಕಾರಣ ಸದರಿ ಭಾವಚಿತ್ರಗಳನ್ನು ನಿಪಿ–**23** ಮತ್ತು **24** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಎಂ.ಸಿ.ಟಿ. ವಕೀಲರಿಂದ ಆರೋಪಿತನ ಪರವಾಗಿ:**

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.